



## ‘ಥಟ್’ಗೆ ವಿದೇಶದ ಅಭಿಮಾನಿಗಳು!

**ಚಂ**ದನ ವಾಹಿನಿಯ ‘ಥಟ್ ಅಂತ ಹೇಳಿ’ ಕ್ವಿಜ್ ಕಾರ್ಯಕ್ರಮದ 3500ನೇ ಕಂತಿನಲ್ಲಿ ಕತಾರ್‌ನ ಕನ್ನಡಿಗರಿಗೆ ವೇದಿಕೆ ಕಲ್ಪಿಸಿದ್ದು ತುಂಬಾ ಹೆಮ್ಮೆ ಎನಿಸಿತು. ಕರ್ನಾಟಕ ಮಾತ್ರವಲ್ಲ, ವಿದೇಶಗಳಲ್ಲಿರುವ ಕನ್ನಡಿಗರೂ ಅಭಿಮಾನಿಗಳಾಗಿದ್ದಾರೆ ಎನ್ನುವುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಯ್ತು. ಮೂರು ತಲೆಮಾರುಗಳ ಸದಸ್ಯರೂ ಒಟ್ಟಾಗಿ ಕುಳಿತು ವೀಕ್ಷಿಸುವಂತಹ ಕೌಟುಂಬಿಕ ಕಾರ್ಯಕ್ರಮವಾಗಿದ್ದು ಇದುವರೆಗೂ 70,000 ಪುಸ್ತಕಗಳನ್ನು ಹಂಚಲಾಗಿದೆ. ಇದನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಡಾ. ನಾ. ಸೋಮೇಶ್ವರ ಹಾಗೂ ತಂಡದವರು ಅಭಿನಂದನಾರ್ಹರು.

—ಕೆ.ಎನ್. ಪ್ರಭಾಕರ ಗುಪ್ತ ಹಾಸನ; ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ವಿಜೇತರ ಹೆಸರು ಬಹಿರಂಗಪಡಿಸಲಿ

ಸೀಜನ್ ಎರಡರಲ್ಲಿ ಆರಂಭಗೊಂಡಿರುವ ‘ಕನ್ನಡದ ಕೋಟ್ಯಧಿಪತಿ’ ರಮೇಶ್ ಅರವಿಂದರ ಸಾರಥ್ಯದಲ್ಲಿ ಚೆನ್ನಾಗಿ ಮೂಡಿ ಬರುತ್ತಿದೆ. ಹಿಂದಿನ ಸೀಜನ್ನಿನಲ್ಲಿದ್ದ ‘ಕೋಟ್ಯಾಧಿಪತಿ’ ತನ್ನ ವ್ಯಾಕರಣ ದೋಷವನ್ನು ಸರಿಪಡಿಸಿಕೊಂಡು ‘ಕೋಟ್ಯಧಿಪತಿ’ ಆಗಿದೆ.

ಆದರೆ ವೀಕ್ಷಕರಿಗೆ ಕೇಳುವ ‘ಸುವರ್ಣ ತಾಂಬೂಲ’ ಪ್ರಶ್ನೆಯ ವಿಜೇತರು ಯಾರು ಎಂಬುದು ತಿಳಿಯುತ್ತಿಲ್ಲ. ಯಾವಾಗ ಈ ಪ್ರಶ್ನೆಯ ವಿಜೇತರ ಹೆಸರನ್ನು ಬಹಿರಂಗಪಡಿಸಲಾಗುವುದು ಎಂಬುದನ್ನು ದಯವಿಟ್ಟು ಈ ರಿಯಾಲಿಟಿ ಷೋನ ನಿರ್ಮಾಪಕರು ತಿಳಿಸುವರೇ?

—ಮುರಲೀಧರ ಕುಲಕರ್ಣಿ, ಬೀದರ್

## ನಿರಾಶೆಗೊಳಿಸಿದ ‘ಪದ್ಮಾವತಿ’

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಪದ್ಮಾವತಿ’ ಧಾರಾವಾಹಿಯು ಜುಲೈ 27 ರಂದು ಸುಖಾಂತ್ಯವಾಗುವುದೆಂದು ನಿರೀಕ್ಷೆಯಲ್ಲಿದ್ದವರಿಗೆ ಅತ್ಯಂತ ನಿರಾಶೆಯಾಗಿದೆ. ಧಾರಾವಾಹಿಯನ್ನು ಅಂತ್ಯಕ್ಷಣದವರೆಗೂ ತಂದು ಕೊನೆಯಲ್ಲಿ ತುಳಸಿಯನ್ನು ಅಪಹರಿಸಿ, ಮತ್ತೆ ಮುಂದುವರೆಸುವ ಉದ್ದೇಶವೇನು ಎಂದು ನಿರ್ದೇಶಕರೇ ಹೇಳಬೇಕು. ವಿನಾಕಾರಣ ಕಥೆಯನ್ನು ಎಳೆದುಕೊಂಡು ಹೋಗುವ ಪ್ರವೃತ್ತಿ ಹಲವು ಧಾರಾವಾಹಿಗಳಲ್ಲಿ ಕಂಡು ಬರುತ್ತಿದೆ. ಇನ್ನು ಮುಂದಾದರೂ ಧಾರಾವಾಹಿಗಳನ್ನು ವರ್ಷಾನುಗಟ್ಟಲೆ ಎಳೆದುಕೊಂಡು ಹೋಗದೆ ಚುಟುಕಾಗಿ ಮುಕ್ತಾಯಗೊಳಿಸಿದರೆ ಪ್ರೇಕ್ಷಕರಿಗೆ ಉಪಕಾರ ಮಾಡಿದಂತೆ.

—ಬಿ. ಚಾಮರಾಜ ಅರಸ್, ಮೈಸೂರು

ವಾರದ ಪತ್ರ

## ಕನ್ನಡ ಕಂಪು ಪಸರಿಸಲಿ..

**ಚಂ**ದನ ವಾಹಿನಿಯ ‘ಶುಭೋದಯ ಕರ್ನಾಟಕ’ ನಾನು ತಪ್ಪದೆ ನೋಡುವ ಒಂದು ನೆಚ್ಚಿನ ಕಾರ್ಯಕ್ರಮ. ಕಾರ್ಯಕ್ರಮವು ಚೆನ್ನಾಗಿ ಮೂಡಿಬರುತ್ತಿದೆ. ಕನ್ನಡಿಗರ ಸಾಧನೆಗಳನ್ನು ಸರಳವಾಗಿ ಮಂಡಿಸುತ್ತಿರುವ ಸುಂದರ ಕಾರ್ಯಕ್ರಮ. ಆದರೆ ಈ ಕಾರ್ಯಕ್ರಮದಲ್ಲಿ ಅಪಸ್ವರವೆಂಬಂತೆ ಕೆಲವು ನಿರೂಪಕರು ತಮ್ಮ ಇಂಗ್ಲಿಷ್ ಪಾಂಡಿತ್ಯವನ್ನು ಪ್ರದರ್ಶಿಸಲು ಬಳಸುತ್ತಿರುವುದು ದುರದೃಷ್ಟಕರ. ಜುಲೈ 31ರಂದು ನಿರೂಪಕ ಶ್ರೀನಿವಾಸ್ ಹಾಗೂ ನಿರೂಪಕಿ ನಂದಿನಿ ಚಲನಚಿತ್ರ ಗಾಯಕ, ಸಂಗೀತ ಸಂಯೋಜಕ ಗುರುಕಿರಣ್ ಅವರನ್ನು ಸಂದರ್ಶಿಸಿದರು. ನಿರೂಪಕರಿಬ್ಬರೂ ಕಾರ್ಯಕ್ರಮವನ್ನು ಇಂಗ್ಲಿಷ್ ಭಾಷೆಯಲ್ಲಿ ನಡೆಸಿಕೊಟ್ಟಂತೆ ಭಾಸವಾಯಿತು. ಕನ್ನಡ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದೇನೆಯೇ ಅಥವಾ ಕೆಟ್ಟ ಇಂಗ್ಲಿಷ್ ಕಾರ್ಯಕ್ರಮ ನೋಡುತ್ತಿದ್ದೇನೆಯೇ ಎಂದು ತಿಳಿಯದಾಯಿತು. ಯುವಕರನ್ನು ಮುನ್ನೆಲೆಗೆ ತರುವ ಚಂದನದ ಬಯಕೆ ಸರಿಯಾಗಿದೆ. ಆದರೆ ಕನ್ನಡದ ಕೊಲೆ ಮಾಡದಿರಲಿ. ನಿಮ್ಮ ವಾಹಿನಿಯ ಮೂಲಕ ಶುದ್ಧ ಕನ್ನಡದ ಚಂದನದ ಕಂಪು ಪ್ರಪಂಚದಾದ್ಯಂತ ಪಸರಿಸಲಿ ಎಂಬ ಆಶಯವನ್ನು ಹುಸಿ ಮಾಡಬೇಡಿ.

—ಮಲ್ಲಿಕಾರ್ಜುನ ಎಂ., ಬೆಂಗಳೂರು

## ವಾಸ್ತವ ಸಮಾಜಕ್ಕೆ ಹಿಡಿದ ಕನ್ನಡಿ

ಟಿ.ಎನ್. ಸೀತಾರಾಂ ಅವರ ‘ಮಗಳು ಜಾನಕಿ’ ಪ್ರಸಾರವಾಗುತ್ತಿದೆ. ಮಾಯಾಮೃಗದಿಂದಲೂ ಅಭಿಮಾನಿಯಾದ ನಾವು, ಅವರ ಧಾರಾವಾಹಿಗಾಗಿ ಕಾಯುತ್ತಿದ್ದೆವು.

ಆಡಂಬರದ ವೇಷಭೂಷಣಗಳು, ಮನೆಯೊಳಗಿನ ಮತ್ಸರಗಳು, ಯಾವ ದಿಕ್ಕು, ಗುರಿ, ದಾರಿ ಇಲ್ಲದೆ ಚಲಿಸುತ್ತಿರುವ ಧಾರಾವಾಹಿಗಳನ್ನು ವಿಧಿಯಿಲ್ಲದೇ ನೋಡಿ ಸಾಕಾಗಿದ್ದ ಜನರಿಗೆ ಹಬ್ಬದ ಊಟ ಸಿಕ್ಕಿದೆ. ಖಂಡಿತ ಸೀತಾರಾಂರವರ ಧಾರಾವಾಹಿಯಲ್ಲಿ ರಾಜಕೀಯ, ಕಾನೂನು, ಸಾಹಿತ್ಯ ಕೌಟುಂಬಿಕ, ಸಂಗೀತ, ಸಾಮಾಜಿಕ, ಹಾಸ್ಯ... ಈ ರೀತಿ ಪ್ರತಿಯೊಂದಕ್ಕೂ ಗಮನ ಕೊಟ್ಟು ಸಿಂಪಲ್ಲಾಗಿ ಜನರ ಮನವನ್ನು ಗೆಲ್ಲುವಲ್ಲಿ ಯಶಸ್ವಿಯಾಗುತ್ತದೆ. ಅವರ ಧಾರಾವಾಹಿಯಿಂದ ಪ್ರಾರಂಭವಾದ ‘ಸಂವಾದ’ ಕಾರ್ಯಕ್ರಮ ನಂತರ ‘ಜಾತ್ರೆ’ಯಾಗಿ ಪರಿವರ್ತನೆಯಾಯಿತು. ಮತ್ತೆ ಈಗ ‘ಸಂವಾದ’ದ ಘನತೆ ಮೂಡಲಿ.

—ಸುಮತಿ ಟಿ.ಎನ್., ತಿಪಟೂರು; ಮೇಘನಾ ಜಯತೀರ್ಥ ಜಹಗೀರದಾರ, ಧಾರವಾಡ; ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಅಸಹಜ

ಟಿವಿ ವಾಹಿನಿಗಳಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳನ್ನು ನೋಡುತ್ತಿದ್ದರೆ, ಈ ಚಾನೆಲ್‌ಗಳು ವೀಕ್ಷಕರನ್ನು ಯಾವ ಪರಿ ಅರಿತಿದ್ದಾರೆ ಅನ್ನುವ ಅನುಮಾನ ಬರುತ್ತದೆ. ಝೀ ಟಿವಿಯಲ್ಲಿ ಬರುತ್ತಿರುವ ಅತಿ ಬಾಲಿಶ ‘ಜೋಡಿ ಹಕ್ಕಿ’, ಅತಿ ಕಲ್ಮಷ ‘ಸುಬ್ಬುಲಕ್ಷ್ಮಿ ಸಂಸಾರ’, ಅತಿ ಮಾನುಷ ‘ಮಹಾದೇವಿ’, ‘ನಾಗಿಣಿ’, ‘ಯಾರೇ ನೀ ಮೋಹಿನಿ’ ಹಾಗೂ ಅತಿ ರಂಜಿತ ‘ಕಮಲಿ’ ಧಾರಾವಾಹಿಗಳ ಮಧ್ಯೆ, ಕಲರ್ ಸೂಪರ್‌ನಲ್ಲಿ ಬರುತ್ತಿರುವ ‘ಮಗಳು ಜಾನಕಿ’ ಒಂದು ಒಳ್ಳೆಯ ಪ್ರಯತ್ನ. ಆದರೆ ಇಂದಿನ ಇಂಟರ್ನೆಟ್, ವಾಟ್ಸಪ್ ಯುಗದಲ್ಲಿ, ಇದರ ನಾಯಕ ಆನಂದ್, ತನ್ನ ನಿರಪರಾಧಿತ್ವವನ್ನು ನಿರೂಪಿಸಲು ಒಂದು ಫೈಲ್ ಹಿಡ್ಕೊಂಡು ದಿನಗಟ್ಟಲೇ ಹ್ಯಾಪ್ ಮೋರೆ ಹಾಕಿಕೊಂಡು ಜಾನಕಿ ಮನೆ ಸುತ್ತ ಮುತ್ತ ಸುತ್ತಾಡೋದು ಅಸಹಜ ಅನ್ನಿಸುತ್ತದೆ. ಆ ಕಾಗದದ ಫೋಟೋ ತೆಗೆದು ಜಾನಕಿಯ ವಾಟ್ಸಪ್ಗೆ ಒಂದು ವಾಯ್ಸ್ ಮೆಸೇಜ್ ಸಮೇತ ಕಳಿಸಿದರಾಗುತ್ತಿತ್ತು. ಇದೆಲ್ಲದರ ನಡುವೆಯೂ ಇದೊಂದು ಉತ್ತಮ ಧಾರಾವಾಹಿ.

— ಮ. ಕುಮಾರಸ್ವಾಮಿ, ಬೆಂಗಳೂರು

## ನಗೆಯೇ ಬರುತ್ತಿಲ್ಲ

ಹೊಸ ‘ಪಾಪ ಪಾಂಡು’ ಧಾರಾವಾಹಿ ಪ್ರಸಾರವಾಗುತ್ತಿದೆ. ಏನು ಮಾಡಿದರೂ ನಗಲು ವೀಕ್ಷಕರು ಇದ್ದಾರೆಂಬ ದೃಷ್ಟಿ ನಿರ್ಮಾಪಕರಿಗೆ ಇದ್ದಂತಿದೆ. ಈ ಧಾರಾವಾಹಿ ವೀಕ್ಷಕರನ್ನು ನಗೆ ಅಲೆಯಲ್ಲಿ ತೇಲಿಸಿ ಬಿಡುತ್ತದೆ ಎಂದು ತಮಗೆ ತಾವೇ ತಿಳಿದುಕೊಂಡಂತೆ ಇದೆ.

ಅಸಹಜ ಪಾತ್ರಗಳು, ಬಾಲಿಶ ಮಾತುಗಳು ಧಾರಾಳವಾಗಿದ್ದು ಹಿಂದಿನ ‘ಪಾಪ ಪಾಂಡು’ವನ್ನು ಯಾವುದರಲ್ಲಿಯೂ ಸರಿಗಟ್ಟಲಾರದು. ಹೀಗಿದ್ದರೂ, ನಿರ್ಮಾಪಕರು ಈ ಹಿಂದೆ ಮುಖ್ಯಪಾತ್ರಗಳಲ್ಲಿದ್ದವರನ್ನು ತಂದರೆ ಮತ್ತೆ ಜನಮನ ಸೆಳೆಯಬಹುದೆಂಬ ಉಮೇದಿನಲ್ಲಿ ಈ ಧಾರಾವಾಹಿ ತಯಾರಿಸಿ ಪ್ರಸಾರ ಮಾಡುತ್ತಿದ್ದಾರೆ.

—ಶಂಕರೇಗೌಡ ತುಂಬಕೆರೆ, ಮಂಡ್ಯ